ಆಫೀಸಿನ ಹೆಸರು.	ದಸ್ತಾವೇಜಿನ ಮತ್ತು ಬುಕ್ಕಿನ ನಂಬರ್.	ಕಕ್ಷಿಗಾರರು. ದಸ್ತಾವೇಜು ಬರದುಕೊಟ್ಟವನ ಹೆಸರು ಮತ್ತು ತಪಸೀಲ್.	ಕಕ್ಷಿಗಾರರು. ಬರೆಸಿಕೊಂಡವನ ಹೆಸರು ಮತ್ತು ತಪಸೀಲ್.	ದಸ್ತಾವೇಜಿನ ಕ್ರಯ.	ರಿಜಿಸ್ಟರ್‌ಬ್ಯೆ ಫೀಜಿನ ಪ್ರಮಾಣ.	ರಿಜಿಸ್ಟ್ರಾರರ ಫೀಜಿನ ಪ್ರಮಾಣ.	ದಸ್ತಾವೇಜಿನ ಸ್ವಭಾವ.
ಬನವಂನೇಶ್ವರ ಸಬ್ ರಿಜಿಸ್ಟ್ರರ್ ಆಫೀಸ್.	1ನೇ ಬುಕ್ಕು 1884-85 ಇನವಿ ನಂಬರ್ 120	ಸುಂಡ್ರಪಾಳ್ಯದ ಜಮಾಲುರ್ದಿ	ಸುಂಡ್ರಪಾಳ್ಯದ ಲಕ್ಷ್ಮೀನಾರಣಪ್ಪ	0	22 1 85	22 1 85	ರಾಮಸಾಗರದ ಹೋಬಳಿ ಸುಂಡ್ರಪಾಳ್ಯದ ಖುಷ್ಕಿ 13ನೇ ಬೀಜವರಿ ೧೮೮೫ ಕಂದಾಯ ಕಿಸ್ತು ದೇಖೀಲ್ 3 6 6ವುಳ್ಳ ಜಮೀನ್ 17 ರೂಪಾಯಿಗೆ ಕ್ರಯ
	ಡಿಟೋ 127	ಜಕರ್ಡಿಕುಪ್ಪಶಿವಶಾಸ್ತ್ರಿ	ನುಕ್ಕನಹಳ್ಳಿ ಅಚ್ಚೆ	0	5 2 85	5 2 85	ನಿಂನನ್ನ ಮದುವೆ ಮಾಡಿಕೊಳ್ಳುವ ಬಗ್ಯೆ ಕ್ಯಾಸಂಬಳ್ಳಿ ಹೋಬಳಿ ಜೋಡಿ ಶಟ್ಟಿಕುಂಟೆ ಗ್ರಾಮದಲ್ಲಿ ವೊಂದು ಹಿಸ್ಸೆಯಾ ಗಂಗನಹಳ್ಳಿ ಶಾನುಭೋಗ ವಿರುಪಾಕ್ಷಪ್ಪನಿಂದ ಕ್ರಯಕ್ಕೆ ತಗದುಕೊಂಡ ತರೀ 275—276ನೇ ನಂಬರ್ ಬೀಜವರಿ ೧೮೮೫ ಜಮೀನ್ ನಿನಗೆ ಕೊಟ್ಟಿಯಿಧೇನೆಂದು
	1ನೇ ಬುಕ್ಕು 1886—87 ನಂಬರ್ 73	ಬೇತಮಂಗಲ ಶಾನುಭೋಗವಾಪಂಣ	ವುತ್ತನೂರಲ್ಲಿರುವ 1ನೇ ಮಲ್ಲಯ್ಯ 2ನೇ ಸುಬ್ಬರಾಯ	0	17 9 86	17 9 86	ನನ್ನ ರಖಾವು ಮಗಳಾದ ವೆಂಕಟಸ್ವಾಮ್ಮನ್ನ ನೀನು ಪ್ರಸ್ತ ಮಾಡಿಕೊಂಡು ನನ್ನ ವೃದ್ಧಾಪ್ಯಕಾಲದಲ್ಲಿ ವುಪಚಾರ ಮಾಡತಕ್ಕ ಬಗ್ಯೂ ನಿನಗೆ ನನ್ನ ಚರ ಸ್ಥಾವರ ಸ್ವತ್ತುಗಳು ಕೊಟ್ಟು ಇರುವದು ಚೊಕ್ಕರಬಂಡೆ ಗ್ರಾಮದ ಖಳೆಯಣ ಪುಲ್ಲೂನ್ನನೆ ಬೇತಮಂಗಲ ಬಣಜಿಗರ ಬೀದೀಲಿರುವ ಮಾಳಿಗೆ ಮನೆ ಚರಸ್ಯತ್ತು ಸಹ ನಿಮಿಗೆ ಕೊಟ್ಟುಯಿಧೇನೆಂದು
ಮುಳಬಾಗಿಲ್ ಸಬ್ ರಿಜಿಸ್ಟ್ರರ್ ಆಫೀಸ್.	1ನೇ ಬುಕ್ಕು 1885—86 ನಂಬರ್ 71	ಅಕ್ಕದೊಡ್ಡಿ ರಾಮಣ್ಣನ ಹೆಂಡತಿ ಮುನೆಕ್ಕ	ಮಾರಂಡಹಳ್ಳಿ ತಿಮ್ಮಯ್ಯನ ಮಗ ರಂಗಪ್ಪ ವಾಸಸ್ಥಳ ಪರಮಾಕನಹಳ್ಳಿ	16 9 85	21 11 85.	21 11 85	ಬೈರಕೂರು ಕೆರೀಕೆಳಗೆ ತರೀ೧೪॥೦ ಜಮೀನ್ 50 ರೂಪಾಯಿಗೆ ಕ್ರಯ
	4ನೇ ಬುಕ್ಕು 1887—88 ನಂಬರ್ 1	ಕನವೆನಹಳ್ಳಿಲಿರುವ ಪೆಸ್ತರ ಚಂಗಿ	ಕಸರನಹಳ್ಳಿ ಪಸ್ತರನಂಗಂಣ	29 6 87	7 7 87	7 7 87	ಜೀವನಾಂಶಕ್ಕೆ 25 ರೂ. ತೆಗದು ಕೊಂಡು ರಿಲೀಜ್ ಪತ್ರ
	4ನೇ ಬುಕ್ಕು 1886—87 ನಂಬರ್ 4	ಮಿಟ್ಟಿಮರೀ ಬಳೇ ನಂಜ ಮಾನುಕಲ್ಲು ವಾನಸ್ಥ	1ರಾಮಚಂದ್ರಪುರ ಶಾನುಭೋಗ ಅಂಬಾಜಯ್ಯ 2 ಯು ರಚಿನ್ನನಹಳ್ಳಿ ಜೊತಿನಗರದ ನಾಗಮ್ಮ	26 5 86	1 6 86.	1 6 86.	30 ರೂಪಾಯಿಗಳು ಸಂದಿರುವ ದಾಗಿ ರೇತಿ

ಅಬ್ದುಲ್‌ರಹಿಮ್ಮಾ, ರಿಜಿಸ್ಟ್ರರ್.

ಕೋಲಾರ ಡಿಸ್ಟ್ರಿಕ್ಟ್ ಡೆಪ್ಯುಟಿ ಕಮ್ಮಿಷನರವರ ಆಫಿಸಿನಿಂದ.

ತಾರೀಖು 14ನೇ ಜೂ೯ 1889.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ, ಈಚಿಗೆ ಈ ಡಿಸ್ಟ್ರಿಕ್ಟಿನಲ್ಲಿ ವಿಧವಿಧವಾದ ಹೆಸರುಗಳಿಂದ ಅನೇಕ ಕಂಪನಿಗಳು ಏರ್ಪಟ್ಟಿರುವದಲ್ಲದೆ ದಿನವಹಿ ಹೊಸಕಂಪನಿಗಳು ಯೇರ್ಪಡುತ್ತಲಿವೆ, ಈ ಕಂಪನಿಯವರು ಷೇರ್ ಹೊಲ್ಡರ್‌ಗಳಿಗೆ ನ್ಯಾಯಭೋಧನೆಗಳಿಂದ ಹೆಚ್ಚಾದ ಸಹಾಯವನ್ನು ಕೊಡುವದಾಗಿ ಆಶೆಯನ್ನು ವುಂಟುಮಾಡಿ ತದ್ವಾರ ಭಾರಿಯಾಗಿ ದ್ರವ್ಯ ಸಂಪಾದನೆ ಮಾಡುತ್ತಿರುವದಾಗಿ ತಿಳಿಯಬಿರುತ್ತೆ.

ಈ ಕಂಪನಿಗಳು ತಮ್ಮ ತಮ್ಮ ಪ್ರಸಿದ್ಧಪತ್ರಿಕೆಯಲ್ಲಿ ನಮೂದಿಸಿ ಯಿರುವ ಲೆಖ್ಖಾಚಾರಗಳು ಬರಿ ಪೊಹೆ ವುಳ್ಳದ್ದಾಗಿದ್ದೂ ಜನಗಳಿಗೆ ಆಶೆ ವುಂಟುಗಲು ಮಾಯೆತೋರಿನತಕ್ಕದ್ದಾಗಿದ್ದೂ ಯಿವೆ.

ವಂದು ಕಂಪೆನಿಯಲ್ಲಿ ಫೀ ಇಸಂ ವಂದು ರೂಪಾಯಿ ಪ್ರಕಾರ ಕಾಲ್ಸ್ ಕಟ್ಟುವ 10 ಜನ ಷೇರ್ ಹೊಲ್ಡರ್‌ಗಳು ಯಿದ್ದುಈ 10 ಮಂದಿಯಲ್ಲಿ ಪ್ರತಿ ಬಬ್ಬನಿಗೂ ಸ್ವಲ್ಪಕಾಲದಲ್ಲಿಯೆ ಹೆಚ್ಚಾದ ನಫೆ ಒಕ್ಕುವಾದದರೆ ಆ ನಫೆಗೆ ತಕ್ಕಷ್ಟು ವರಮಾನ ಕಂಪೆನಿಯವರಿಗೆ ಹ್ಯಾಗೆ ಬರುತ್ತೆಂಬುವದನ್ನ ಕುರಿತು ಯೆಲ್ಲ ಷೇರ್ ಹೊಲ್ಡರ್‌ಗಳು ಬಹಳ ಜಾಗರೂಕತೆಯಿಂದ ದೋಚಿಸತಕ್ಕದ್ದಾಗಿ ಯಿರುತ್ತೆ. ಪ್ರಥಮದಲ್ಲಿ ಕೆಲವು ಜನಗಳಿಗೆ ಮಾತ್ರ ಅನ್ಯಾಯವಾಗಿ ಹೆಚ್ಚಾದ್ರವ್ಯ ಸಂಪಾದನೆ ಆಗೋಣವೂ ಕಾಲ್ಸ್‌ಗಳು ಕಟ್ಟುವದು ನಿಂತು ಹೋದರೆ ವೈದಿಕ ಸಾವಿರಾರು ಜನಗಳಿಗೆ ಬಹಳನಷ್ಟ ಸಂಭವಿಸೋಣವೂ ನಿಸ್ಸಂದೇಹವಾದ ಸಂಗತಿಯಾಗಿ ಯಿರುತ್ತೆ. ಯೆಲ್ಲ ಷೇರ್‌ದಾರರಿಂದಲೂ ಜನುಮಯಿಸುವ ಭೂರೀ ಹಣವನ್ನ ಕಂಪೆನಿಗೆ ಕೀರಿದ ವುದ್ಯೋಗಸ್ತರು ಮತ್ತು ಅವರಿಗೆ ಆಪ್ತರಾದ ಕೆಲವು ಷೇರದಾರ್ರು ಸಹ ಪಂಚಿಕೊಳ್ಳುತ್ತ್ತಾ ಬಂದರೆ ಇತರರಿಗೆಲ್ಲ ನಷ್ಟ ವುಂಟಾಗುವದರಲ್ಲಿ ಸಂದೇಹವೆ ಯಿಲ್ಲ.

ಇದರಿಂದ ಲಾಭಯಲ್ಲಿ ಷೇರದಾರ್ರು ಯಾವ ಕೋರಿಕೆ ಮತ್ತು ಕುತೂಹಲದಿಂದ ಕಂಪೆನಿಗೆ ಕೀರಿ ಕಾಲ್ಸ್ ಕಟ್ಟುತ್ತಾರೋ ಅದು ಭಗ್ನವಾಗಿ ಆಶೈರಿಗೆ ಮೊಸಹೊಗುವರು. ಜನಗಳಿಗೆ ವೃಥಾಭ್ರಮೆ ಪಡಿಸುತ್ತಲಿರುವ ಈ ಕಂಪೆನಿಗಳ ಆಡಳಿತಗಳು ಗವರ್ನಮೆಂಟಿನವರ ಜಾಹಿರಾತಿಗೆ ಬಂದು—ಷೇರ್‌ದಾರ್ರಾಗಬೇಕೆಂದು ವೈದ್ದೇಶಿಸುವವರಿಗೆಲ್ಲ ಮೇಲ್ಕಂಡ ಮೇರೆ ವುಂಟಾಗತಕ್ಕ ಅಪಾಯವನ್ನ ಕುರಿತು ಚನ್ನಾಗಿ ಯೆಚ್ಚರಿಸಬೇಕೆಂದು ಅಪ್ಪಣೆ ಕೊಡಿಸಿರುವ ಕಾರಣ ಸಮಸ್ತ ಜನಗಳ ಕ್ಷೇಮಾರ್ಥವಾಗಿ ಈ ಇಸ್ತಿಹಾರ್‌ನಾಮೆ ಕೊಡಲ್ಪಟ್ಟಿರುತ್ತೆ.

ಜನಗಳು ಯಿದನ್ನ ವಿವೇಕದಿಂದ ತಿಳಿದುಕೊಂಡು ಯಿಂಥಾ ಜಾಜಾಡುವೋ ಪಾದೆಯಲ್ಲಿರುವ ಕಂಪೆನಿಗಳಿಗೆ ಕೀರಿ ತಮ್ಮ ಕಷ್ಟದಿಂದ ಸಂಪಾದಿಸುವ ಹಣವನ್ನು ವ್ಯಯವಾಡತಕ್ಕದ್ದು ಯಷ್ಟುಮಾತ್ರವೂ ವಿಹಿತವಲ್ಲವೆಂತ ಯೀಸಿಸಬಹುದಾಗಿ ಯಿದೆ.

ಅಬ್ದುಲ್‌ರಹಿಮಾನ್,
ಡೆಪ್ಯುಟಿ ಕಮ್ಮಿಷನರ್.

ಮೈಸೂರು ಸಬ್ ಜಡ್ಜೀಯವರ ಕೋರ್ಟ್‌ನಲ್ಲಿ.

ದಿವಾಳಿಯಾದ ಡಿಕ್ರೀ ದೇಣೇದಾರ ಮೈಸೂರು ಮಂಡೀಮಹಲಾದಲ್ಲಿ ಇರುವ ಪೊಲೀಸ್ ಜವಾ ಷೇಕ್ ಯಿಸಮಾಯಿಲ್ ಯಂಬವನ ವಿಷಯದಲ್ಲಿ—

ಸನ್ 1888ನೇ ಇಸವಿ ದಿವಾಳೀ ಕೇಸ್ ನಂಬರ್ 383.

ಹುಕುಂ.

ಮೇಲ್ಕಂಡ ಷೇಕ್ ಯಿಸ್ಮಾಯಿಲ್‌ನು ನಿರ್ಬಂಧದಿಂದ ಖುಲಾಸೆಯಾಗಬೇಕೆಂದು ಕೊಟ್ಟಅರ್ಜೀ ಅಂಶವು ಈ ಕೋರ್ಟು ರೂಬರೂ ಅರ್ಜೀದಾರನಾದ ಷೇಕ್ ಯಿಸ್ಮಾಯಿಲ್ ಖುದ್ದು ಹಾಜರು—ಮತ್ತು ಸದರೀಯವನ ಲೇಣೇದಾರ್ರಾದ ವರಿಗೂ ದರ್ಯಾಫ್ತೀ ಮಾಡಲ್ಪಟ್ಟಿತು.

ಈ ಕೆಳಗೆ ನಮೂದು ಮಾಡಲ್ಪಡುವ ಲೇಣೇದಾರ್ರುತಮಗೆ ಈ ದರ್ಯಾಫ್ತೀ ನೋಟಿಸ್ ಜಾರಿಯಾಗಿದ್ದಾಗ್ಯೂ ಖುದ್ದಾಗಿಯಾಗಲಿ ಅಥವಾ ಲಾಯರ್ ಮೂಲಕವಾಗಿಯಾಗಲಿ ಹಾಜರಾಗುನದಕ್ಕೆ ತಪ್ಪಿಹೋದರು ಯಾರಂದರೆ—1ನೇ ಯಿತಿರಾಜಸಂಪತ್ತು ಮಾರ ಬ್ಯಾಂಕ್, 2ನೇ ಮೈಸೂರು ಧನಾಭಿವೃದ್ಧೀ ಬ್ಯಾಂಕ್, 3ನೇ ಟರ್ಕ್‌ಬ್ಯಾಂಕು.

ಸಿವಿಲ್ ಪ್ರೊಸಿಜ್ಯೂರ್ ಕೋಡಿನ 20ನೇ ಅಧ್ಯಾಯದ ನಿರೂಪಣೆಗಳ ಫಲವನ್ನ ಸದರೀ ಷೇಕ್ ಯಿಸ್ಮಾಯಿಲ್‌ನು ಹೊಂದುವದಕ್ಕೆ ಹಕ್ಕುದಾರನಾಗುವದರ ಮೂಲಕ ದಿವಾಳಿಯಾದವನೆಂದು ತೀರ್ಮಾನಿಸಲ್ಪಟ್ಟಿರುತ್ತೆಯಾಗಿ ಸದರೀ ದಿವಾಳಿಯಾದವನ್ನ ನಿರ್ಬಂಧದಿಂದ ವಿವೇಚನೆ ಮಾಡಿರುವದಲ್ಲದೆ ಇದಕ್ಕೆ ಲಗ್ಗತ್ತಾಗಿರುವ ಪಟ್ಟಿಯಲ್ಲಿ ಕಂಡ ಯಾವ ಸಾಲಕ್ಕೋಸ್ಕರವಾಗಿಯಾಗಲಿ ದಸ್ತಗಿರೀ ಮಾಡಲ್ಪಟ್ಟು ನಿರ್ಬಂಧಪಡುವ ಜವಾಬ್ದಾರಿಯಿಂದ ಸಹ ಅವನ್ನ ನಿಖಾಲಸ್ ಮಾಡಲಾಗಿರುತ್ತೆ ಯೆಂದು ಇದರಿಂದ ಹುಕುಂ ಮಾಡಲ್ಪಟ್ಟಿರುತ್ತೆ.

ಸನ್ 1889ನೇ ಇಸವಿ ಜುಲೈ 5ನೇ ತಾರೀಖಿನಲ್ಲಿ ಈ ಕೋರ್ಟು ಮೊಹರ್ ನಮ್ಮ ದಸ್ತಖತ್‌ನಿಶಿ ಕೊಡಲ್ಪಟ್ಟಿತು.

ಸಾಲದ ಪಟ್ಟಿ.

ನಂಬರ್.	ಲೇಣೇದಾರ್ರು ಅಥವಾ ದಾವಾದಾರ್ರ ಹೆಸರು ಮತ್ತು ವಿವರ ಮತ್ತು ಹಾಲೀ ತಿಳಿಯಬಂದ ಅವರುಗಳ ವಾಸಸ್ಥಳ.	ಜೊಮ್ಲಗ.	ಯಾವಾಗ ದೇಣೇ ಹುಟ್ಟಿದ್ದು.	ದೇಣೆಯ ಸ್ವಭಾವ ಮತ್ತು ಅದರ ಪ್ರತಿಭೂ ಮತ್ತು ಗಿರ್ವೀ ಯೇನಾದರೂ ಯಿದ್ದರೆ.	ಷರಾ.
1	ಮೈಸೂರು ಯಿತಿರಾಜಸಂಪತ್ತು ಮಾರ ಬ್ಯಾಂಕು.	75—0—0	..	ಡಿಕ್ರೀ ಬಾಬತು	

ಸಿ. ಶ್ರೀನಿವಾಸಯ್ಯಂಗಾರ್,
ಸಬ್ ಜಡ್ಜ್.